**ಕರ್ನಾಟಕ ಸರ್ಕಾರ**

ಸಂ:ಡಿಟಿಇ 01 ಎಸ್‌ಸಿಹೆಚ್(1) 2013-14

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ:20-04-2013.

**-::ಸುತ್ತೋಲೆ::-**

**ವಿಷಯ:-** 2013-14ನೇ ಸಾಲಿನ ವೃತ್ತಿಪರ ಶಿಕ್ಷಣ ಕೋರ್ಸುಗಳ ಪ್ರವೇಶ ಮತ್ತು ವ್ಯಾಸಂಗ ಸಂದರ್ಭಗಳಲ್ಲಿ ಮುಂಗಡವಾಗಿ ಶುಲ್ಕವನ್ನು ಪಾವತಿಸುವಂತೆ ಒತ್ತಾಯಿಸುತ್ತಿರುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್229ಬಿಎಸಿ 80, ದಿ: 16-12-1982.
2. ಸಮಾಜ ಕಲ್ಯಾಣ ಆಯುಕ್ತರ ಸುತ್ತೋಲೆ ಸಂಖ್ಯೆ: ಸಕನಿ: ಇಡಿ.3: ಸಿಆರ್: ಸತ್ತೋಲೆ: 2010-11, ದಿ: 30-9-2010 ಮತ್ತು ದಿ: 18-01-2012.
3. ಸರ್ಕಾರದ ಆದೇಶದ ಸಂಖ್ಯೆ: ಇಡಿ 40 ಟಿಇಸಿ 2012, ದಿ: 06-03-2012.
4. ಈ ಕಛೇರಿಯ ಪತ್ರ ಸಂಖ್ಯೆ: ಡಿಟಿಇ 04 ಎಸ್‌ಸಿಹೆಚ್(1) 2012-13, ದಿ: 27-02-2013 ಮತ್ತು 02-02-2013.

***********

ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಿಇಟಿ ಮೂಲಕ ಸರ್ಕಾರದ ಕೋಟಾದಡಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ 2010-11ನೇ ಸಾಲಿನಿಂದ **₹2.00 ಲಕ್ಷಕ್ಕಿಂತ** ಹೆಚ್ಚು ಹೊಂದಿರುವ ಅನುಸೂಚಿತ ಜಾತಿ / ಅನುಸೂಚಿತ ಪಂಗಡದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉಲ್ಲೇಖ(1)ರ ಸರ್ಕಾರದ ಆದೇಶಾನುಸಾರ ಶುಲ್ಕ ವಿನಾಯಿತಿಯನ್ನು ಈ ಕಛೇರಿಯಲ್ಲಿ ಮಂಜೂರು ಮಾಡಲಾಗುತ್ತದೆ ಹಾಗೂ ಕುಟುಂಬದ ವಾರ್ಷಿಕ ಆದಾಯ **₹2.00 ಲಕ್ಷಕ್ಕಿಂತ** ಕಡಿಮೆ ಇರುವ ಅನುಸೂಚಿತ ಜಾತಿ / ಅನುಸೂಚಿತ ಪಂಗಡದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ, ಶುಲ್ಕ ವಿನಾಯಿತಿಯನ್ನು ಮಂಜೂರು ಮಾಡಲಾಗುತ್ತದೆ.

ಸದರಿ ಅನುಸೂಚಿತ ಜಾತಿ / ಅನುಸೂಚಿತ ಪಂಗಡದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಸರ್ಕಾರವು ಶುಲ್ಕ ವಿನಾಯಿತಿಯ ಮಂಜೂರಾತಿ ಕಾರ್ಯಕ್ರಮವನ್ನು ಅನುಷ್ಠನಗೊಳಿಸಿದ್ದು, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಬೋಧನಾ ಶುಲ್ಕವನ್ನು ಪಾವತಿಸಲು ಅಶಕ್ತರಾಗಿರುವುದರಿಂದ, ಅವರ ಕುಟುಂಬದ ವಾರ್ಷಿಕ ಆದಾಯವನ್ನು ಆಧರಿಸಿ ಶುಲ್ಕ ಮರುಪಾವತಿಯನ್ನು ನೀಡಲಾಗುತ್ತಿದೆ. ಈ ಸಂಬಂಧ ಸದರಿ ಅನುಸೂಚಿತ ಜಾತಿ / ಅನುಸೂಚಿತ ಪಂಗಡದ ಇಂಜಿನಿಯರಿಂಗ್ ವಿದ್ಯಾರ್ಥಿಗಳು ವೃತ್ತಿಪರ ಕೋರ್ಸುಗಳಿಗೆ ಪ್ರವೇಶಾತಿ ಹಾಗೂ ವ್ಯಾಸಂಗದ ಸಂದರ್ಭದಲ್ಲಿ ಯಾವುದೇ ವಿಶ್ವವಿದ್ಯಾಲಯಗಳು / ಕಾಲೇಜುಗಳು / ಸಂಸ್ಥೆಗಳು, ಬೋಧನಾಶುಲ್ಕವನ್ನು ಪಾವತಿಸುವಂತೆ ಒತ್ತಾಯಿಸಬಾರದೆಂದು ಉಲ್ಲೇಖ(4)ರ ಪತ್ರಗಳನ್ವಯ ಹಲವು ಬಾರಿ ಈ ಕಛೇರಿಯಿಂದ ಸುತ್ತೋಲೆ ಮೂಲಕ ರಾಜ್ಯದ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಿಗೂ / ಪಾಲಿಟೆಕ್ನಿಕ್‌ಗಳಿಗೂ ತಿಳಿಸಿದ್ದರೂ ಸಹ ಕೆಲವು ಸಂಸ್ಥೆಗಳು ಬೋಧನಾ ಶುಲ್ಕವನ್ನು ಪಾವತಿಸಲು ಒತ್ತಾಯಿಸುತ್ತಿರುವುದು ಈ ಕಛೇರಿಯ ಗಮನಕ್ಕೆ ಬಂದಿದ್ದು, ತೊಂದರೆಗೊಳಗಾದ ವಿದ್ಯಾರ್ಥಿಗಳು / ಪೋಷಕರುಗಳು ಖುದ್ದಾಗಿ ಬಂದು ಮೌಖಿಕವಾಗಿ / ಪತ್ರದ ಮುಖೇನ ದೂರುಸಲ್ಲಿಸಿದ್ದು, ಇದಕ್ಕನುಗುಣವಾಗಿ ಈ ಕಛೇರಿಯಿಂದ ಹಿಂಬರಹವನ್ನು ನೀಡಿದ್ದರೂ ಸಹ ಕೆಲವು ಸಂಸ್ಥೆಗಳು ನಿರಾಕರಿಸುತ್ತಿರುವುದು ವಿಷಾದನೀಯ ಬೆಳವಣಿಗೆಯಾಗಿರುತ್ತದೆ.

2010–11 ರಿಂದ 2013–14ರ ಅವಧಿಗೆ ಸಂಬಂಧಿಸಿದಂತೆ ಅನುಸೂಚಿತ ಜಾತಿ / ಅನುಸೂಚಿತ ಪಂಗಡದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಂಜೂರಾತಿಗಾಗಿ ಇಲಾಖೆಗೆ ಲಭ್ಯವಾಗಿರುವ ಅನುದಾನದಲ್ಲಿ 2010–11ನೇ ಸಾಲಿನಿಂದ ಬಾಕಿಯಿರುವ ಶುಲ್ಕ ಮರುಪಾವತಿಯನ್ನು ಮಂಜೂರು ಮಾಡಲಾಗುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಆದ ಕಾರಣ ಸದರಿ ಅನುಸೂಚಿತ ಜಾತಿ / ಅನುಸೂಚಿತ ಪಂಗಡದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇನ್ನೂ ಮುಂದೆ ಯಾವುದೇ ಕಾರಣಕ್ಕೂ (ಸರ್ಕಾರದ ಶುಲ್ಕ ಮರುಪಾವತಿಸುವರೆಗೆ) ಬೋದಾನ ಶುಲ್ಕವನ್ನು ಪಾವತಿಸುವಂತೆ ಕಡ್ಡಾಯವಾಗಿ ಒತ್ತಾಯಿಸಬಾರದಾಗಿ ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಇನ್ನು ಮುಂದೆ ಈ ರೀತಿ ಅನುಸೂಚಿತ ಜಾತಿ / ಅನುಸೂಚಿತ ಪಂಗಡದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕವನ್ನು ಪಾವತಿಸಲು ಒತ್ತಾಯಿಸುವುದು ಈ ಕಛೇರಿಯ ಗಮನಕ್ಕೆ ಬಂದಲ್ಲಿ ಆಂತಹ ಸಂಸ್ಥೆಯ ವಿರುದ್ಧ ಇಲಾಖೆಯು ಸರ್ಕಾರಕ್ಕೆ ಹಾಗೂ ಎ.ಐ.ಸಿ.ಟಿ.ಇ ಇವರ ಗಮನಕ್ಕೆ ತಂದು ಸೂಕ್ತ ಕ್ರಮ ಜರುಗಿಸಲಾಗುವುದು.

ನಿರ್ದೇಶಕರು

20/04/2013

***ಇವರಿಗೆ,***

**ಪ್ರಾಂಶುಪಾಲರು,**

**ರಾಜ್ಯದಲ್ಲಿನ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳಿಗೆ ಅವಗಾಹನೆಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.**

***ಪ್ರತಿ:-***

1. ಸರ್ಕಾರದ ಪ್ರದಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಆಧೀನ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು, ಅಪ್ತ ಶಾಖೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಅರಮನೆ ರಸ್ತೆ, ಬೆಂಗಳೂರು, ಇವರ ಮಾಹಿತಿಗಾಗಿ
4. ಸಂಯೋಜನಾಧಿಕಾರಿಗಳು, ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5. ಹೆಚ್ಚುವರಿ ಪ್ರತಿ / ಕಡತದ ಪ್ರತಿ.